ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 290

ಸದಸ್ಯರ ಹೆಸರು : ಶ್ರೀ. ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 22.09.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಅನುಷ್ಠಾನಗೊಳ್ಳುತ್ತಿರುವ ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು ಯಾವುವು; ಸದರಿ ಯೋಜನೆಗಳಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯಿಂದ ರೈತರಿಗೆ ನೀಡುವ ಸಹಾಯಧನ ಶೇಕಡ ಪ್ರಮಾಣ ಎಷ್ಟು;	ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಅನುಷ್ಠಾನಗೊಳ್ಳುತ್ತಿರುವ ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳ ಪಟ್ಟಿಯನ್ನು ಅನುಬಂಧ-1ರಲ್ಲಿ ಹಾಗೂ ಸದರಿ ಯೋಜನೆಗಳಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ರೈತರಿಗೆ ನೀಡುವ ಸಹಾಯಧನದ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ.
ಆ)	2020-21ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಯೋಜನೆಗಳಿಗೆ ರಾಜ್ಯ ಸರ್ಕಾರದಿಂದ ಎಸ್.ಸಿ.ಪಿ/ಟಿ.ಎಸ್.ಪಿ ಯಡಿ ರೈತರಿಗೆ ಹೊಂದಾಣಿಕೆ ಮೊತ್ತವನ್ನು ನೀಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಎಷ್ಟು ಮೊತ್ತ ನೀಡಲಾಗಿದೆ;	2020-21ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಯೋಜನೆಗಳಿಗೆ ಎಸ್.ಸಿ.ಪಿ/ಟಿ.ಎಸ್.ಪಿ ಯಡಿ ರೈತರಿಗೆ ಹೊಂದಾಣಿಕೆ ಮೊತ್ತವನ್ನು ನೀಡಲು ರಾಜ್ಯ ಸರ್ಕಾರದಿಂದ ಅನುದಾನ ನಿಗದಿಯಾಗಿರುವುದಿಲ್ಲ.
ಇ)	2019-20ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ಅನುಷ್ಠಾನಗೊಳಿಸಿರುವ ಎಲ್ಲಾ ಯೋಜನೆಗಳನ್ನು ಪ್ರಸಕ್ತ ಸಾಲಿನಲ್ಲಿಯೂ ಅನುಷ್ಠಾನಗೊಳಿಸಲಾಗುತ್ತಿದೆಯೇ;	ಇಲ್ಲ.
ಈ)	ಪ್ರಸಕ್ತ ಸಾಲಿನಲ್ಲಿ 30 ಹೆಚ್.ಪಿ ಟ್ರಾಕ್ಟರ್ ಗಳಿಗೆ ಸಹಾಯಧನ ನೀಡಲಾಗುತ್ತಿದೆಯೇ; ಹಾಗಿದ್ದರೆ ಸಹಾಯಧನದ ಮೊತ್ತ ಎಷ್ಟು; ಇಲ್ಲವಾದಲ್ಲಿ ಯಾವ ಕಾರಣಕ್ಕೆ ನೀಡಲಾಗುತ್ತಿಲ್ಲ?	ಪ್ರಸಕ್ತ ಸಾಲಿನಲ್ಲಿ 30 ಹೆಚ್.ಪಿ ಟ್ರಾಕ್ಟರ್ ಗಳಿಗೆ ಸಹಾಯಧನ ನೀಡಲು ಕ್ರಮವಹಿಸಲಾಗುತ್ತಿದೆ. ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ತೋಟಗಾರಿಕೆಯಲ್ಲಿ ಯಾಂತ್ರೀಕರಣ ಕಾರ್ಯಕ್ರಮದಡಿ 30 ಹೆಚ್.ಪಿ ಟ್ರಾಕ್ಟರ್ ಗಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಕ್ಕೆ ಶೇ.50 ರಂತೆ ಗರಿಷ್ಠ ಮೊತ್ತ ರೂ.2.50 ಲಕ್ಷ ಮತ್ತು ಇತರೆ ವರ್ಗಕ್ಕೆ ಶೇ.40 ರಂತೆ ಗರಿಷ್ಠ ಮೊತ್ತ ರೂ.2.00 ಲಕ್ಷಗಳ ಸಹಾಯಧನ ನೀಡಲು ಅವಕಾಶವಿರುತ್ತದೆ. ಆದರೆ ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರದ ವತಿಯಿಂದ ಸದರಿ ಕಾರ್ಯಕ್ರಮವು ಇನ್ನೂ ಅನುಮೋದನೆಗೊಂಡಿರುವುದಿಲ್ಲ.

ಸಂಖ್ಯೆ: HORTI/342/HGM/2020-admn-Horti-Sec

(ನಾರಾಯಣ ಗೌಡ)
ತೋಟಗಾರಿಕೆ, ಪೌರಾಡಳಿತ
ಮತ್ತು ರೇಷ್ಮೆ ಸಚಿವರು

2020-21ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರ

ಕ್ರ.ಸಂ.	ಯೋಜನೆಗಳು
I	ಕೇಂದ್ರ ನೆರವಿನ ಯೋಜನೆಗಳು
1	ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ
2	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ)
3	ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ
4	ರಾಷ್ಟ್ರೀಯ ತೋಟಗಾರಿಕೆ ಮಿಷನ್
5	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ
II	ರಾಜ್ಯವಲಯ ಯೋಜನೆಗಳು
1	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ,
2	ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ
3	ಸಮಗ್ರ ತೋಟಗಾರಿಕಾ ಅಭಿವೃದ್ಧಿ ಯೋಜನೆ
4	ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ
5	ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ ಯೋಜನೆ
6	ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ
7	ತೋಟಗಾರಿಕೆ ಕಟ್ಟಡಗಳು
8	ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ -II (ಸುಜಲಾ-III) -ಇಎಪಿ
9	ಕೃಷಿ ಭಾಗ್ಯ (ತೋಟಗಾರಿಕೆ)
10	ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು
11	ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ
12	ತೋಟಗಾರಿಕೆ ಮೂಲ ಸೌಲಭ್ಯ ಅಭಿವೃದ್ಧಿ
13	ಬಾಗಲಕೋಟೆಯಲ್ಲಿ ತೋಟಗಾರಿಕ ವಿಶ್ವ ವಿದ್ಯಾಲಯದ ಬಂಡವಾಳ
III	ಜಿಲ್ಲಾವಲಯ ಯೋಜನೆಗಳು
1	ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ
2	ತೋಟಗಾರಿಕೆ ಕಟ್ಟಡಗಳು
3	ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ
4	ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ
5	ಪ್ರಚಾರ ಮತ್ತು ಸಾಹಿತ್ಯ
6	ಶೀಥಲ ಗೃಹಗಳಿಗೆ ಸಹಾಯಧನ ಯೋಜನೆ
7	ರೈತರಿಗೆ ತರಬೇತಿ
8	ಜೇನು ಸಾಕಾಣಿಕೆ

2020-21ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳಡಿಯಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ರೈತರಿಗೆ ನೀಡುವ ಸಹಾಯಧನದ ವಿವರ

<table>
<tr><th>ಕ್ರ. ಸಂ.</th><th>ಯೋಜನೆಗಳು</th><th colspan="3">ಎಸ್.ಸಿ.ಪಿ/ಟಿ.ಎಸ್.ಪಿ ರೈತರಿಗೆ ನೀಡುವ ಶೇಕಡಾವಾರು ಸಹಾಯಧನ (%)</th></tr>
<tr><td>I</td><td colspan="4">ಕೇಂದ್ರ ನೆರವಿನ ಯೋಜನೆಗಳು</td></tr>
<tr><td>1</td><td>ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ)</td><td colspan="3">ಹನಿ ನೀರಾವರಿ ಅಳವಡಿಕೆಗೆ ಗರಿಷ್ಠ 5 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡಲಾಗುತ್ತಿದೆ. ಮೊದಲ 2 ಹೆಕ್ಟೇರ್ ಪ್ರದೇಶಕ್ಕೆ ಶೇ. 90 ರಷ್ಟು ಸಹಾಯಧನ ಮತ್ತು ನಂತರದ 3 ಹೆಕ್ಟೇರ್ ಪ್ರದೇಶಕ್ಕೆ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಶೇಕಡಾವಾರು ಮಿತಿಯೊಳಗೆ ಸಹಾಯಧನ ನೀಡಲಾಗುತ್ತಿದೆ.</td></tr>
<tr><td rowspan="13">2</td><td rowspan="13">ರಾಷ್ಟ್ರೀಯ ತೋಟಗಾರಿಕೆ ಮಿಷನ್</td><td colspan="3">ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ವಿವಿಧ ಘಟಕಗಳಿಗೆ ಶೇ.30 ರಿಂದ 50 ರವರೆಗೆ ಸಹಾಯಧನ ನೀಡಲಾಗುತ್ತಿದ್ದು, ವಿವರ ಈ ಕೆಳಗಿನಂತಿದೆ;</td></tr>
<tr><td>ಘಟಕಗಳು</td><td>ಘಟಕದ ವೆಚ್ಚ (ರೂ. ಲಕ್ಷಗಳಲ್ಲಿ)</td><td>ಶೇಕಡವಾರು(%)</td></tr>
<tr><td>ತರಕಾರಿ ಹಾಗೂ ಸಾಂಬಾರು ಬೀಜೋತ್ಪಾದನೆ</td><td>Open pollinated ಬೆಳೆಗಳು - 0.35 ಪ್ರತಿ ಹೆಕ್ಟೇರ್ ಗೆ, ಹೈಬ್ರಿಡ್ - 1.50/ ಪ್ರತಿ ಹೆಕ್ಟೇರ್ ಗೆ</td><td>35</td></tr>
<tr><td>ಪುನಃಶ್ಚೇತನ - ಮಾವು, ಗೇರು, ಲಿಂಬೆ ಹಾಗೂ ಕಾಳು ಮೆಣಸು</td><td>0.40/ ಪ್ರತಿ ಹೆಕ್ಟೇರ್ ಗೆ</td><td>50</td></tr>
<tr><td>ನೀರು ಸಂಗ್ರಹಣಾ ಘಟಕ</td><td>ಸಮುದಾಯ ಕೃಷಿ ಹೊಂಡ- 20.00 / ಪ್ರತಿ ಘಟಕಕ್ಕೆ , ವೈಯಕ್ತಿಕ ಕೃಷಿ ಹೊಂಡ - 1.50 /ಪ್ರತಿ ಘಟಕಕ್ಕೆ</td><td>50</td></tr>
<tr><td>ಸಂರಕ್ಷಿತ ಬೇಸಾಯ ಕಾರ್ಯಕ್ರಮ</td><td>ಪಾಲಿಮನೆ - 42.00/ ಪ್ರತಿ ಹೆಕ್ಟೇರ್ ಗೆ, ನೆರಳು ಪರದೆ ಮನೆ- 19.70/ ಪ್ರತಿ ಹೆಕ್ಟೇರ್ ಗೆ</td><td>50</td></tr>
<tr><td>ಸಮಗ್ರ ಪೋಷಕಾಂಶ ಮತ್ತು ರೋಗ/ಕೀಟ ನಿರ್ವಹಣೆ</td><td>0.04/ ಪ್ರತಿ ಹೆಕ್ಟೇರ್ ಗೆ</td><td>30</td></tr>
<tr><td>ಜೇನು ಕೃಷಿ</td><td>0.02 / ಪ್ರತಿ ಜೇನು ಕಾಲೋನಿಗೆ</td><td>40</td></tr>
<tr><td>ಯಾಂತ್ರೀಕರಣ</td><td>ಟ್ರಾಕ್ಟರ್ - 3.00 /ಪ್ರತಿ ಘಟಕಕ್ಕೆ, ಪವರ್ ಟಿಲ್ಲರ್ (<8HP) - 1.00/ಪ್ರತಿ</td><td>35</td></tr>
<tr><td>ಕೊಯ್ಲೋತ್ತರ ನಿರ್ವಹಣಾ ಘಟಕ - ಪ್ಯಾಕ್ ಹೌಸ್</td><td>4.00 / ಪ್ರತಿ ಘಟಕಕ್ಕೆ</td><td>50</td></tr>
<tr><td>ಕೊಯ್ಲೋತ್ತರ ನಿರ್ವಹಣಾ ಘಟಕ - ಪ್ರಾಥಮಿಕ ಸಂಸ್ಕರಣಾ ಘಟಕ</td><td>25.00 / ಪ್ರತಿ ಘಟಕಕ್ಕೆ</td><td>40</td></tr>
<tr><td>ಕೊಯ್ಲೋತ್ತರ ನಿರ್ವಹಣಾ ಘಟಕ - ಈರುಳ್ಳಿ ಶೇಖರಣಾ ಘಟಕ</td><td>1.75 / ಪ್ರತಿ ಘಟಕಕ್ಕೆ</td><td>50</td></tr>
<tr><td>ತಳ್ಳುವ ಗಾಡಿ</td><td>0.30 / ಪ್ರತಿ ಘಟಕಕ್ಕೆ</td><td>50</td></tr>
<tr><td>II</td><td colspan="4">ರಾಜ್ಯ ವಲಯ ಯೋಜನೆಗಳು</td></tr>
<tr><td>1</td><td>ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ</td><td colspan="3">ಪ್ರಸಕ್ತ ಸಾಲಿನಲ್ಲಿ ಸದರಿ ಯೋಜನೆಯಡಿ ನಿಗದಿಯಾದ ಅನುದಾನವನ್ನು SMAM (Sub Mission on Agricultural Mechanization)ಯೋಜನೆಯಡಿ ಪ.ಜಾ/ ಪ.ಪಂ. ಫಲಾನುಭವಿಗಳಿಗೆ ಪವರ್ ಟಿಲ್ಲರ್ ವಿತರಣೆಗೆ ಶೇ.90ರಂತೆ ಗರಿಷ್ಠ 1 ಲಕ್ಷದವರೆಗೆ ಸಹಾಯಧನ ನೀಡಲು ವಿನಿಯೋಗಿಸಲಾಗುತ್ತಿದೆ.</td></tr>
<tr><td>2</td><td>ಸಮಗ್ರ ತೋಟಗಾರಿಕಾ ಅಭಿವೃದ್ಧಿ ಯೋಜನೆ</td><td colspan="3">ರಾಜ್ಯದಲ್ಲಿ ಕೋವಿಡ್-19ರ ಲಾಕ್ ಡೌನ್ ಸಂಧರ್ಭದಲ್ಲಿ ಹಣ್ಣು, ಹೂವು ಮತ್ತು ತರಕಾರಿ ಬೆಳೆಗಾರರಿಗೆ ಉಂಟಾದ ನಷ್ಟಕ್ಕೆ ಪರಿಹಾರವಾಗಿ ಹೂವಿನ ಬೆಳೆಗಾರರಿಗೆ ರೂ.25000/- ಹೆಕ್ಟೇರ್ ಗೆ ಹಾಗೂ ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ರೂ.15000/- ಹೆಕ್ಟೇರ್ ಗೆ ನೀಡಲಾಗುತ್ತಿದೆ.</td></tr>
</table>

[illegible] ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಡಿಯಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ರೈತರಿಗೆ ನೀಡುವ ಸಹಾಯಧನದ ವಿವರ

ಕ್ರ. ಸಂ.	ಯೋಜನೆಗಳು	ಎಸ್.ಸಿ.ಪಿ/ಟಿ.ಎಸ್.ಪಿ ರೈತರಿಗೆ ನೀಡುವ ಶೇಕಡಾವಾರು ಸಹಾಯಧನ (%)
3	ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ	ಸಸ್ಯ ಸಂರಕ್ಷಣೆ ಔಷಧಿಗಳನ್ನು ಖರೀದಿಸಿದ ಪರಿಶಿಷ್ಟ ಜಾತಿ (SC) ಮತ್ತು ಪರಿಶಿಷ್ಟ ಪಂಗಡ (ST) ರೈತರಿಗೆ ಒಂದು ಘಟಕಕ್ಕೆ (1 ಹೆಕ್ಟೇರ್) ತಗಲುವ ಒಟ್ಟಾರೆ ವೆಚ್ಚ ರೂ.10,000/-ದ ಶೇ.90 ರಂತೆ ಪ್ರತಿ ಹೆಕ್ಟೇರ್ ಗೆ ಗರಿಷ್ಟ ರೂ.9000/-ಗಳ ಸಹಾಯಧನವನ್ನು ನೀಡಲಾಗುತ್ತಿದೆ.
III	**ಜಿಲ್ಲಾವಲಯ ಯೋಜನೆಗಳು**	
1	ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ	ಹನಿ ನೀರಾವರಿ ಅಳವಡಿಕೆಗೆ ಗರಿಷ್ಠ 5 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡಲಾಗುತ್ತಿದೆ. ಮೊದಲ 2 ಹೆಕ್ಟೇರ್ ಪ್ರದೇಶಕ್ಕೆ ಶೇ. 90 ರಷ್ಟು ಸಹಾಯಧನ ಮತ್ತು ನಂತರದ 3 ಹೆಕ್ಟೇರ್ ಪ್ರದೇಶಕ್ಕೆ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಶೇಕಡಾವಾರು ಮಿತಿಯೊಳಗೆ ಸಹಾಯಧನ ನೀಡಲಾಗುತ್ತಿದೆ.
2	ಜೇನು ಸಾಕಾಣಿಕೆ	ಜೇನು ಪೆಟ್ಟಿಗೆ, ಜೇನು ಕುಟುಂಬ ಹಾಗೂ ಸ್ಟ್ಯಾಂಡ್ ಗೆ ತಗಲುವ ವೆಚ್ಚ ರೂ.4500/-ರಲ್ಲಿ ಶೇ.90 ರಂತೆ ರೂ.4050/- ಗಳ ಸಹಾಯಧನ ನೀಡಲಾಗುತ್ತಿದೆ.